ತಾವು ಸಿವಿಕ್ ಅಮೆನಿಟೀಸ್ ಸೈಟ್ ಪರಭಾರೆ ಮಾಡಿಲ್ಲವೆಂದು ಹೇಳಿದ್ದೀರಿ. ಅದು ಆಗಿದೆ ಎಂದು ನನಗೆ ನಿಖರವಾಗಿ ತಿಳಿದು ಬಂದಿದೆ. ಅದರ ದಾಖಲೆಗಳನ್ನು ನಾನು ಇಲ್ಲಿ ತಂದಿಲ್ಲ. ಇಲ್ಲಿ ಕೊಟ್ಟಿರುವ ಅನೇಕ ಮಾಹಿತಿಗಳು ಸತ್ಯಕ್ಕೆ ದೂರವಾಗಿದ್ದು, ಅದನ್ನು ವೆರಿಫೈ ಮಾಡಿಸಿ. ಸೊಸೈಟಿ ಆಕ್ಟ್ ಪ್ರಕಾರ, ಯಾವ ಕ್ರಮ ತೆಗೆದುಕೊಳ್ಳಬೇಕೋ, ತೆಗೆದುಕೊಂಡು ಮುಂದಿನ ಮೀಟಿಂಗ್‌ನಲ್ಲಾದರೂ ಅದಕ್ಕೆ ರಿಪ್ಲೈ ಕೊಡಿ.

ಶ್ರೀ ಡಿ.ಕೆ. ಶಿವಕುಮಾರ್ : ಮೀಟಿಂಗ್ ನಡೆಯದಿರುವ ಬಗ್ಗೆ ದಿ. 2.11.00ದಂದು ಅವರಿಗೆ ನೋಟೀಸ್ ಇಷ್ಯೂ ಮಾಡಿದ್ದು, ತನಿಖೆ ಮಾಡಿಸಿ, ಕಾನೂನಿನಂತೆ ಕ್ರಮ ಕೈಗೊಳ್ಳುತ್ತೇನೆ.

ಗೌರಿಬಿದನೂರು ಪಟ್ಟಣದಲ್ಲಿ ಬಸ್ ಡಿಪೋ ಪ್ರಾರಂಭಿಸುವುದು

568 - ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೋಲಾರ ಜಿಲ್ಲೆ ಗೌರಿಬಿದನೂರಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಡಿಪೋ ಪ್ರಾರಂಭಿಸುವುದಕ್ಕೆ 2000-01ನೇ ಸಾಲಿನಲ್ಲಿ ಆಯವ್ಯಯದಲ್ಲಿ ಸೇರಿಸಿದ್ದು ನಿಜವೇ?*

ಆ) *ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಯಾವುವು?*

ಶ್ರೀ ಸಿ. ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) :

ಅ) ನಿಜ.

ಆ) ಸದರಿ ಘಟಕದ ನಿರ್ಮಾಣ ಕಾಮಗಾರಿಯನ್ನು ಸಂಸ್ಥೆಯ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಪ್ರಾರಂಭಿಸಿ ನಿರ್ವಹಿಸಲು ಕ್ರಮ ಜರುಗಿಸಲಾಗುವುದು.

12.40 ಪಿ.ಎಂ

ಶ್ರೀ ಎನ್. ಹೆಚ್. ಶಿವಶಂಕರ್ ರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಕೊಟ್ಟ ಉತ್ತರ ಸಮಂಜಸವಾಗಿದ್ದರೂ ಸಮಾಧಾನಕರವಾಗಿಲ್ಲವೆಂದು ನನ್ನ ಭಾವನೆ. ನಮ್ಮ ತಾಲ್ಲೂಕಿನಲ್ಲಿ ಸುಮಾರು 210 ಹಳ್ಳಿಗಳು ಇವೆ. ಸುಮಾರು ಹಳ್ಳಿಗಳಿಗೆ ಸಾರಿಗೆ ವ್ಯವಸ್ಥೆ ಇರುವುದಿಲ್ಲ. ಕೇವಲ 50-60 ಹಳ್ಳಿಗಳಿಗೆ ರಾಜ್ಯ ಹೆದ್ದಾರಿಯ ಸಂಪರ್ಕ ಇರಬಹುದು. ಇಂಥ ಕಡೆ ಮಾತ್ರ ಸಾರಿಗೆ ಬಸ್‌ಗಳು ಓಡಾಡುತ್ತಿವೆ. ಸದ್ಯಕ್ಕೆ ನಮಗೆ ನೆರೆಯ ಡಿಪೋಗಳಾದ ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ ಹಾಗೂ ಕೇಂದ್ರ ಡಿಪೋಗಳಿಂದ ಮಾತ್ರ ಬಸ್‌ಗಳು ಬರುತ್ತಿವೆ. ಹೀಗಿದ್ದರೂ ಸಾಕಷ್ಟು ಸೌಕರ್ಯವಿರುವುದಿಲ್ಲ. ಗೌರಿಬಿದನೂರಿನಲ್ಲಿ ಡಿಪೋ ನಿರ್ಮಾಣ ಮಾಡಲಿಕ್ಕೆ ಈಗಾಗಲೇ 10 ಎಕರೆ ಜಮೀನು ಇಲಾಖೆಯ ವಶಕ್ಕೆ ಕೊಟ್ಟು ಸುಮಾರು ಐದು ವರ್ಷಗಳಾಗಿವೆ. ಇದಕ್ಕೆ ಅಂದಾಜು ಕೂಡ ತಯಾರಾಗಿದ್ದು ನಾನು ಈ ಬಗ್ಗೆ ಮಾನ್ಯ

ಮುಖ್ಯಮಂತ್ರಿಗಳಲ್ಲಿ ನಿವೇದಿಸಿಕೊಂಡಾಗ ಆಗ ಅವರು ಆದ್ಯತೆಯ ಮೇರೆಗೆ ಈ ಕೆಲಸ ತೆಗೆದುಕೊಳ್ಳುತ್ತೇವೆಂದು ಭರವಸೆ ನೀಡಿದ್ದರು. ಆದ್ದರಿಂದ, ದಯಮಾಡಿ ಈ ಬಸ್ ಡಿಪೋ ನಿರ್ಮಾಣದ ಕಾರ್ಯವನ್ನು ಆದಷ್ಟು ಬೇಗ ಕೈಗೆತ್ತಿಕೊಳ್ಳಬೇಕೆಂದು ತಮ್ಮ ಮುಖೇನ ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ಗೌರಿಬಿದನೂರು ನಗರದಲ್ಲಿ ಬಸ್ ಡಿಪೋ ನಿರ್ಮಾಣಕ್ಕೆ ಸರ್ವೇ ನಂ. 199ರಲ್ಲಿ 10 ಎಕರೆ ಜಾಗ ಈಗಾಗಲೇ ಲಭ್ಯವಿದೆ. ಇದನ್ನು ನಿರ್ಮಿಸುವುದಕ್ಕೆ 2000-01ನೇ ಆಯವ್ಯಯದಲ್ಲಿ ಸೇರಿಸಿಕೊಂಡಿದ್ದೇವೆ. ಕಟ್ಟಡಗಳ ನಿರ್ಮಾಣಕ್ಕಾಗಿ ವೆಚ್ಚ ಮಾಡಲು ನನ್ನ ಸಂಸ್ಥೆಯಲ್ಲಿ ಕೇವಲ ಏಳು ಕೋಟಿ ರೂಪಾಯಿಗಳು ಮಾತ್ರ. ಆದರೆ ಅಂದಾಜು ಮಾಡಿರುವ ಪ್ರಕಾರ ನಮಗೆ 24 ಕೋಟಿ ರೂಪಾಯಿ ಹಣ ಬೇಕಾಗಿರುತ್ತದೆ. ಈ ಹಣವನ್ನು ಕ್ರೋಢೀಕರಣ ಮಾಡಿಕೊಂಡು ಈ ಬಸ್ ಡಿಪೋವಿನ ಕೆಲಸವನ್ನು ಪ್ರಾರಂಭಿಸುತ್ತೇನೆ.

ಶ್ರೀ ಎನ್. ಸಂಪಂಗಿ : ಇವತ್ತು ಬಾಗೇಪಲ್ಲಿಯಲ್ಲಿ ಸುಮಾರು ಒಂದು ಕೋಟಿ ರೂಪಾಯಿ ವೆಚ್ಚದಲ್ಲಿ ಡಿಪೋ ಒಂದನ್ನು ಪ್ರಾರಂಭಿಸಿದ್ದಾರೆ ಇದು ಸರಿಯಾಗಿ ಕೆಲಸ ಮಾಡುತ್ತಿದೆಯೇ? ಗೌರಿಬಿದನೂರು, ಚಿಂತಾಮಣಿ, ಬಾಗೇಪಲ್ಲಿ, ಈ ಮೂರು ಕ್ಷೇತ್ರಗಳ ಬಗ್ಗೆ ಹೇಳುವುದಾದರೆ, ಇವತ್ತು ಸರಿಯಾದ ವೇಳೆಗೆ ಒಂದು ಬಸ್ ಕೂಡ ಸಂಚರಿಸುತ್ತಿಲ್ಲ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡಿದ್ದೀರಾ? ಇವತ್ತು ಬಸ್‌ಗಳು ಕೆಟ್ಟು ಹೋಗಿ, ಗ್ಯಾರೇಜ್‌ನಲ್ಲಿರುವ ಬಸ್‌ಗಳನ್ನು ತಂದು ಬಾಗೇಪಲ್ಲಿಗೆ ಹಾಕುತ್ತಾರೆ. ಸರ್ಕಾರ ಮಂಜೂರು ಮಾಡಿರುವ ಮೆಕಾನಿಕ್‌ಗಳು ಬಾಗೇಪಲ್ಲಿಯಲ್ಲಿ ಇಲ್ಲ, ಅಲ್ಲಿ ಯಾರು ಇದ್ದಾರೆ ಎಂದರೆ ಖಾಯಿಲೆಬಿದ್ದಂಥ ಮೆಕಾನಿಕ್‌ಗಳು ಕೆಲಸ ಮಾಡುತ್ತಾರೆ. ಒಂದು ಕೂಡ ಸರಿಯಾದ ವ್ಯವಸ್ಥೆಯಲ್ಲಿರುವುದಿಲ್ಲ. ಅಲ್ಲಿರುವ ಸುಮಾರು 34 ಬಸ್‌ಗಳಲ್ಲಿ ಸುಮಾರು ಏಳೆಂಟು ಲಕ್ಷ ಕಿಲೋ ಮೀಟರ್ ಓಡಿಸಿರುವಂಥ ಬಸ್‌ಗಳನ್ನು ನಮ್ಮ ಡಿಪೋಕ್ಕೆ ಕೊಟ್ಟಿದ್ದಾರೆ. ಇದರಿಂದಾಗಿ, ಸಾರ್ವಜನಿಕರಿಗೆ, ಶಾಲೆಗೆ ಹೋಗುವ ಮಕ್ಕಳಿಗೆ ಬಹಳ ತೊಂದರೆಯಾಗಿರುವುದರಿಂದ, ಆದಷ್ಟು ಬೇಗ ಈ ಎಲ್ಲಾ ತೊಂದರೆಗಳನ್ನು ಸರಿ ಮಾಡಿಸಿ ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಬಾಗೇಪಲ್ಲಿಯಲ್ಲಿರುವ ಘಟಕದಲ್ಲಿ ಕೆಲವು ಸಿಬ್ಬಂದಿಗಳ ಕೊರತೆ ಇರುವುದು ಕಂಡು ಬಂದಿದೆ. ಈಗಾಗಲೇ ನನ್ನ ಇಲಾಖೆಯಲ್ಲಿ ಖಾಲಿಯಿರುವ 3750 ಹುದ್ದೆಗಳಿಗೆ ಸಂದರ್ಶನ ನಡೆಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಲ್ಲಿ ಈಗಾಗಲೇ ಯಶಸ್ವಿಯಾಗಿದ್ದೇವೆ. ನಿಮ್ಮ ಬಾಗೇಪಲ್ಲಿ ಘಟಕಕ್ಕೆ ಅಗತ್ಯವಾದ ಡ್ರೈವರ್, ಕಂಡಕ್ಟರ್, ಮೆಕಾನಿಕ್ ಸಿಬ್ಬಂದಿಗಳನ್ನು ಕೊಡುವುದಕ್ಕೆ ನಾವು ಈಗಾಗಲೇ ನಿರ್ಣಯಿಸಿದ್ದೇವೆ. ತಕ್ಷಣ ಇವರನ್ನು ಒದಗಿಸಿಕೊಡುತ್ತೇವೆ. ಈ ವರ್ಷದಲ್ಲಿ 850 ಹೊಸ ಬಸ್‌ಗಳನ್ನು ಖರೀದಿಸಿದ್ದರಲ್ಲಿ ಎಲ್ಲಾ ವಿಭಾಗಗಳಿಗೂ ಹಂಚಿಕೆ ಮಾಡಿ ನಾವು ಒದಗಿಸುತ್ತೇವೆ, ನಾವು ಕೂಡ ಈ ನಿಟ್ಟಿನಲ್ಲಿ ಹೊಸ ಬಸ್ ಬೇಕು ಎಂದು ಕೇಳಿದ್ದೀರಿ, ಅಗತ್ಯತೆಯ ಮೇರೆಗೆ ಎಷ್ಟು ಹೊಸ ಬಸ್‌ಗಳನ್ನು ಆ ವಿಭಾಗಕ್ಕೆ ಬೇಕು ಎಂಬುದನ್ನು ಅರಿತುಕೊಂಡು ನಾನು ಹಂತ ಹಂತವಾಗಿ ಹೊಸ ಬಸ್‌ಗಳನ್ನು ತಮ್ಮ ಕ್ಷೇತ್ರಕ್ಕೆ ಒದಗಿಸಿಕೊಡುತ್ತೇನೆ.